ಕರ್ನಾಟಕ ವಿಧಾನ ಸಭೆ

ಶುಕ್ರವಾರ 13ನೇ ಮಾರ್ಚ್ 1998ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-20 ಗಂಟೆಗೆ

ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್ ಕುಮಾರ್) ಅವರು,

ಪೀಠವನ್ನು ಅಲಂಕರಿಸಿದ್ದರು.

(ಪ್ರಶ್ನೋತ್ತರಗಳು)

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು:- ಮುಜರಾಯಿ ಮಂತ್ರಿಗಳ ಊರು ಬಹಳ ದೂರ, ರಾಯಚೂರಿನಿಂದ ಅವರು ಬರಬೇಕು, ಬರುತ್ತಾರೆ.

ಬೆಂಗಳೂರಿನಲ್ಲಿ ಮೇಲ್ಮಹಡಿ ಬಸ್ಸುಗಳ ಸಂಚಾರ

47 (94) ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ವೀಕ್ಷಣೆಗೆ ಮೇಲ್ಮಹಡಿ ಬಸ್ಸುಗಳ ಸಂಚಾರವನ್ನು ಆರಂಭಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಮೇಲ್ಚಾವಣಿ ರಹಿತ ಮೇಲ್ಮಹಡಿ ಬಸ್ಸುಗಳು ಪ್ರತಿದಿನ ಬೆಂಗಳೂರಿನಲ್ಲಿ ಎಷ್ಟು ಸಂಚರಿಸುತ್ತಿವೆ;

ಇ) ಪ್ರತಿ ದಿನ ಸರಾಸರಿ ಈ ಬಸ್ಸುಗಳಲ್ಲಿ ಪ್ರಯಾಣ ಮಾಡುವ ಪ್ರವಾಸಿಗರೆಷ್ಟು;

ಈ) ಈ ಬಸ್ಸುಗಳ ಸಂಚಾರದಿಂದ ಪ್ರತಿ ತಿಂಗಳು ಸಾರಿಗೆ ಸಂಸ್ಥೆಗೆ ಆಗುತ್ತಿರುವ ಲಾಭ ಅಥವಾ ನಷ್ಟವೆಷ್ಟು;

ಉ) ಈ ಬಸ್ಸುಗಳು ಜಯನಗರ ವಾಣಿಜ್ಯ ಸಂಕೀರ್ಣ ಜಯನಗರದ ರಾಗಿಗುಡ್ಡ ಪ್ರೇಕ್ಷಣೀಯ ಸ್ಥಳಗಳನ್ನು ಪ್ರವಾಸಿಗರಿಗೆ ತೋರಿಸುತ್ತಿದೆಯೇ;

ಊ) ಹಾಗಿಲ್ಲದಿದ್ದಲ್ಲಿ ಈ ಬಸ್ಸುಗಳ ಸಂಚಾರವನ್ನು ಆಕರ್ಷಣೀಯಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಅ) ಹೌದು.

ಆ) ಒಂದು ಬಸ್ಸು 04 ಸುತ್ತುವಳಿಗಳಲ್ಲಿ ಸಂಚರಿಸುತ್ತದೆ.

ಇ) ಪ್ರತಿ ದಿನ ಸರಾಸರಿ 67 ಪ್ರಯಾಣಿಕರು ಪ್ರಯಾಣಿಸುತ್ತಾರೆ.

ಈ) ಪ್ರತಿ ತಿಂಗಳು ಸರಾಸರಿ ರೂ. 5,530-00 ಲಾಭ ಆಗಿರುತ್ತದೆ.

ಉ) ಇಲ್ಲ.

ಊ) ಹೌದು.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋಗಲಿಕ್ಕೆ 4 ಬಸ್ಸುಗಳಿವೆ ಮತ್ತು ಇನ್ನು ಹಲವಾರು ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಬಹಳ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ರಾಗಿಗುಡ್ಡ ಮತ್ತು ಯಡಿಯೂರು ಕೆರೆಗೆ ಬಸ್ಸು ಬರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದು ಬಸ್ಸುಗಳ ಸಂಚಾರವನ್ನು ಆಕರ್ಷಣೀಯಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದಾರೆ. ಆಕರ್ಷಣೀಯಗೊಳಿಸಲು ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರವನ್ನು ನೋಡಲಿಕ್ಕೆ ಹೊರಗಡೆಯಿಂದ ಬರತಕ್ಕ ಜನರಿಗೆ ವಿದೇಶಗಳಿಂದ ಬರತಕ್ಕ ಜನರಿಗೆ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸತಕ್ಕ ಉದ್ದೇಶದಿಂದ ಬಿ.ಎಂ.ಟಿ.ಸಿ. ಯವರು ಈ ಬಸ್ಸನ್ನು ಪ್ರಾರಂಭ ಮಾಡಿರತಕ್ಕದ್ದು. ನನ್ನ ನಿರೀಕ್ಷೆಗೂ ಮೀರಿ ಲಾಭವನ್ನು ಸಹ ಮಾಡುತ್ತಿದೆ. ಒಂದು ತಿಂಗಳಿಗೆ ಈ ಬಸ್ಸು 5 ಸಾವಿರಕ್ಕೂ ಹೆಚ್ಚು ಲಾಭವನ್ನು ಮಾಡುತ್ತಿದೆ. ಈ ರೀತಿಯ ಇನ್ನು ಎರಡು ಬಸ್ಸುಗಳನ್ನು ಹೆಚ್ಚು ಮಾಡಬೇಕೆಂದು ಈ ವರ್ಷ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಯಡಿಯೂರು ಕೆರೆ, ರಾಗಿಗುಡ್ಡ ಮತ್ತು ಜಯನಗರ ಕಾಂಪ್ಲೆಕ್ಸ್ ಅಲ್ಲಿಗೆ ಕಳುಹಿಸಬೇಕೆನ್ನುವ ಪ್ರೋಗ್ರಾಮ್ ಕೂಡ ಇಟ್ಟು ಅದರ ಪ್ರಕಾರ ಮಾಡಬೇಕೆಂದು ಸರ್ಕಾರ ಉದ್ದೇಶವನ್ನು ಇಟ್ಟುಕೊಂಡಿದೆ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಬಸ್ಸು ಹೋಗುವುದಕ್ಕೆ ಎಲ್ಲೆಲ್ಲಿ ಮರಗಳು ಅಡ್ಡ ಬರುವುದಿಲ್ಲ ಅಂತಹ ಎಲ್ಲಾ ಸ್ಥಳಗಳಿಗೆ ಕಳುಹಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ತಮ್ಮ ಪ್ರಶ್ನೆ ಬಂದ ಮೇಲೆ ನಾನು

ವೆರಿಫೈ ಮಾಡಿದೆ. ರಾಗೀಗುಡ್ಡಕ್ಕೆ ಬಸ್ಸು ಹೋಗುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ರೂಟ್ ಸರ್ವೆ ಮತ್ತೆ ಮಾಡಿದಾಗ ಏನು ಅಬ್‌ಸ್ಟ್ರಕ್ಷನ್ ಇಲ್ಲದಿದ್ದರೆ ಅದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡೋಣ. ಹೊಸ ಕಾರ್ಯಕ್ರಮಗಳು ಅಂದರೆ ಎರಡು ಬಸ್ಸುಗಳನ್ನು ಹೆಚ್ಚು ಮಾಡುತ್ತಿದ್ದೇವೆ. ಗೈಡ್ ಮತ್ತು ಅನೌನ್ಸರ್ ಇಟ್ಟು ಪಾಸ್‌ಗಳನ್ನು ಕೊಟ್ಟು ಎಲ್ಲಿಬೇಕಾದರೂ ಬಸ್ ಹತ್ತಬಹುದು. ವಿಧಾನಸೌಧದ ಹತ್ತಿರ ಅದು ಬರುತ್ತದೆ. ವಿಧಾನಸೌಧದ ಹತ್ತಿರ ಇಳಿದು ಎರಡು ಗಂಟೆ ಇರಬಹುದು. ಮತ್ತೇ ಅದೇ ಬಸ್ಸು ಬಂದಾಗ ಹತ್ತಿ ಹೋಗಬಹುದು. ಲಂಡನ್‌ನಲ್ಲಿ ಆ ರೀತಿ ಮಾಡಿದ್ದಾರೆ. ಅದನ್ನು ಎಕ್ಸ್‌ಪೀರಿಮೆಂಟ್ ಆಗಿ ಮಾಡಬೇಕೆಂದು ಮಾಡುತ್ತಿದ್ದೇವೆ. ಅದು ಸಕ್ಸಸ್ ಆಗುತ್ತದೆಯೋ ಇಲ್ಲವೋ ಎಂಬುದನ್ನು ನೋಡಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಅದು ಸಕ್ಸಸ್ ಆಗುತ್ತಿದೆ. ಅದನ್ನು ಇನ್ನೂ ಹೆಚ್ಚಿಗೆ ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟಿಕೊಂಡಿದ್ದೇವೆ. ಲಾಲ್‌ಬಾಗ್‌ಗೆ ಕೂಡ ಹೋಗಬೇಕೆಂದು ಮಾಡುತ್ತಿದ್ದೇವೆ.

ದೇವಸ್ಥಾನಗಳ ಫಂಡಿನಿಂದ ನೌಕರರ ನೇಮಕಾತಿ

46(176) ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಪಟ್ಟ ದೇವಸ್ಥಾನಗಳ ಫಂಡಿನಿಂದ ಕೆಲವು ನೌಕರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕೆಲಸಕ್ಕೆ ನೇರವಾಗಿ ತೆಗೆದುಕೊಳ್ಳುವ ಉದ್ದೇಶವೇನು; ವಿವರ ನೀಡುವುದು;

ಇ) ಅವರು ಕೆಲಸ ಮಾಡುವ ಕಾರ್ಯ ಕ್ಷೇತ್ರ ಯಾವುದು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು)

ಅ), ಆ) ಹೌದು, ದೇವಸ್ಥಾನದ ದೈನಂದಿನ ಕಾರ್ಯ ನಿರ್ವಹಣೆಯ ಸಲುವಾಗಿ ಅವಶ್ಯಕ ನೌಕರರನ್ನು ಜಿಲ್ಲಾಧಿಕಾರಿಗಳು ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಈ ನೌಕರರ ಸಂಬಳವನ್ನು ದೇವಾಲಯದ ನಿಧಿಯಿಂದ ಭರಿಸಲಾಗುವುದು.

ಇ) ಸಂಬಂಧಪಟ್ಟ ದೇವಸ್ಥಾನಗಳು.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಅಧ್ಯಕ್ಷರೆ, ತಾವು ನನ್ನ ಸಹಾಯಕ್ಕೆ ಬರಬೇಕಾಗಿದೆ. ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಸತ್ಯಕ್ಕೆ ದೂರವಾದ ಉತ್ತರವನ್ನು ಕೊಟ್ಟಿದ್ದಾರೆ. ಏಕೆಂದರೆ ದೇವಾಲಯದ ದೈನಂದಿನ ಕಾರ್ಯಕ್ರಮದ ಸಲುವಾಗಿ ಅವಶ್ಯಕ ನೌಕರರನ್ನು ಜಿಲ್ಲಾಧಿಕಾರಿಗಳು ನೇಮಕ ಮಾಡಲಿಕ್ಕೆ ಅವಕಾಶವಿದೆಯೆಂದು ಹೇಳಿದ್ದಾರೆ. ನೂರಕ್ಕೂ ಮಿಕ್ಕಿ ಹೆಚ್ಚು ನೌಕರರನ್ನು ಮುಜರಾಯಿ ಇಲಾಖೆಯ ಮಂತ್ರಿಗಳು ನೇಮಕ ಮಾಡಿ ಆಜ್ಞೆ ಹೊರಡಿಸಿದ್ದಾರೆ. ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಅವರಿಗೆ ಎರಡನೇ ದರ್ಜೆ ಗುಮಾಸ್ತರಾಗಿ ನೇಮಕಾತಿ